# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 277 |
| ಉತ್ತರಿಸುವ ದಿನಾಂಕ | 11-12-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಲು ಎಷ್ಟು ಕಛೇರಿಗಳನ್ನು ಹೊಂದಿವೆ; (ವಿಳಾಸದೊಂದಿಗೆ ವಿವರ ನೀಡುವುದು)</td><td>ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಲು ಒಟ್ಟು- 43 ಉಪ ನೋಂದಣಿ ಕಛೇರಿಗಳನ್ನು ಹೊಂದಿದ್ದು, ವಿವರಗಳನ್ನು ಅನುಬಂಧ ರಲ್ಲಿ ನೀಡಿದೆ.</td></tr>
<tr><td>ಆ)</td><td>ಕಳೆದ 03 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ಆಸ್ತಿಗಳು ನೋಂದಣಿಯಾಗಿವೆ; ಈ ಮೂಲಕ ಸಂಗ್ರಹಿಸಲಾದ ನೋಂದಣಿ ಶುಲ್ಕವೆಷ್ಟು; 2024ನೇ ಸಾಲಿನಲ್ಲಿ ಇದೇ ಅವಧಿಯಲ್ಲಿ ನೋಂದಣಿಯಾದ ಆಸ್ತಿಗಳ ಸಂಖ್ಯೆ ಎಷ್ಟು; ತೆರಿಗೆ ರೂಪದಲ್ಲಿ ಸಂಗ್ರಹಿಸಲಾದ ನೋಂದಣಿ ಶುಲ್ಕವೆಷ್ಟು; (ವರ್ಷವಾರು ವಿವರ ನೀಡುವುದು)</td><td>ಬೆಂಗಳೂರು ನಗರದಲ್ಲಿ ಸಂಗ್ರಹಣೆಯಾಗಿರುವ ರಾಜಸ್ವ ಮತ್ತು ದಸ್ತಾವೇಜುಗಳ ವಿವರ<br><br>ರೂ.ಕೋಟಿಗಳಲ್ಲಿ<br><br>
<table>
<tr><th>ಕ್ರ. ಸಂ</th><th>ವರ್ಷ</th><th>ದಸ್ತಾವೇಜು ಸಂಖ್ಯೆ</th><th>ರಾಜಸ್ವ ಸಂಗ್ರಹಣೆ ಮೊತ್ತ</th></tr>
<tr><td>1</td><td>2022-23</td><td>510894</td><td>10740.84</td></tr>
<tr><td>2</td><td>2023-24</td><td>530444</td><td>13015.94</td></tr>
<tr><td>3</td><td>2024-25 (ಏಪ್ರಿಲ್ 2024 ರಿಂದ ನವೆಂಬರ್ 2024 ರವರೆಗೆ)</td><td>1567339</td><td>15135.97</td></tr>
</table>
</td></tr>
</table>

| | | |
|---|---|---|
| ಇ) | ಬಹುಮಹಡಿ ವಸತಿ ಸಂಕೀರ್ಣಗಳ ನೋಂದಣಿ, ಮಾರಾಟ ಕುರಿತು ಇ-ಖಾತಾ ತಂತ್ರಾಂಶ ರೂಪಿಸಲಾಗಿದೆಯೇ; ಯಾವ ದಿನಾಂಕದಂದು ಸದರಿ ತಂತ್ರಾಂಶವನ್ನು ಆನ್ ಲೈನ್‌ನಲ್ಲಿ ಜಾರಿಗೊಳಿಸಿದೆ; ಅಕ್ಟೋಬರ್ ಒಂದರಿಂದ ಇ-ಖಾತೆ ಇಲ್ಲದೆ ಮಾರಾಟ ನೋಂದಣಿ ಇಲ್ಲ ಎಂಬ ಕಾರಣಕ್ಕೆ ಸಾವಿರಾರು ಜನರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಇ-ಖಾತಾ ಸಂಬಂಧಿಸಿದಂತೆ, ಅಳವಡಿಕೆಯ ಅನುಷ್ಠಾನ ಈ ರೀತಿಯಾಗಿದೆ.<br>ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ 2006 ರಿಂದಲೇ ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿರುತ್ತದೆ.<br><br>ಜಮೀನಿನ ಸರ್ವೆ ನಕ್ಷೆ (ಸ್ಕೆಚ್) - ನಮೂನೆ-11ಇ ಇರುವ ಮೋಜಿಣಿ ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು ದಿನಾಂಕ: 05-10-2016 ರಿಂದಲೇ ಸಂಯೋಜನೆ ಮಾಡಲಾಗಿದೆ.<br><br>ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿಯೇತ್ತರ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಖಾತಾ ಪಡೆಯಲು ಇ-ಸ್ವತ್ತು ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ ದಿನಾಂಕ:18-07-2014ರ ಸುತ್ತೋಲೆಯಲ್ಲಿ ಸಂಯೋಜನೆಗೊಳಿಸಲಾಗಿದೆ.<br><br>ರಾಮನಗರ ಮತ್ತು ಕನಕಪುರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಖಾತಾ ಪಡೆಯಲು ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಪ್ರಾಯೋಗಿಕವಾಗಿ ದಿನಾಂಕ: 29-01-2020 ರಂದು ಜೋಡಣೆ / ಸಂಯೋಜನೆ ಮಾಡಿ ಆದೇಶ ಹೊರಡಿಸಲಾಗಿದೆ.<br><br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇ-ಆಸ್ತಿ ತಂತ್ರಾಂಶವನ್ನು ಇ-ಖಾತಾ ಪಡೆಯಲು ಪ್ರಾಯೋಗಿಕವಾಗಿ 11 ವಾರ್ಡ್‌ಗಳಲ್ಲಿ ದಿನಾಂಕ:25/10/2021 ರಿಂದ ಹಾಗೂ 30 ವಾರ್ಡ್‌ಗಳಲ್ಲಿ ದಿನಾಂಕ:30/04/2022ರಿಂದ ಇ-ಖಾತಾ ಪಡೆಯಲು ಜೋಡಣೆ ಮಾಡಲಾಗಿರುತ್ತದೆ.<br><br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ULMS ಇ-ಖಾತ ತಂತ್ರಾಂಶವನ್ನು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತುಗಳಿಗೆ ಸಂಯೋಜನೆಗೊಳಿಸಲು ದಿನಾಂಕ: 16/08/2024 ರಿಂದ ಜಾರಿಗೆ ತರಲಾಗಿದೆ.<br><br>ಸ್ವತ್ತುಗಳಿಗೆ ಇ-ಆಸ್ತಿ ಖಾತಾ ಇಲ್ಲದಿದ್ದಲ್ಲಿ ಅಥವಾ ನೊಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಮಾಡಬೇಕಿದ್ದಲ್ಲಿ ಸಾರ್ವಜನಿಕರು ಸಂಯೋಜನೆಯತ್ತರ ನೋಂದಣಿಯ ಮಾದರಿಯನ್ನು ಆಯ್ಕೆ |

| | | |
|---|---|---|
| | | ಮಾಡಿಕೊಂಡು ದಸ್ತಾವೇಜನ್ನು ನೋಂದಾಯಿಸಿಕೊಳ್ಳಲು ಇರುವ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಕಾವೇರಿ ತಂತ್ರಾಂಶದಲ್ಲಿ ಸ್ವತ್ತಿನ ಸ್ವರೂಪವನ್ನು ಇತರೆ ಎಂದು ಆಯ್ಕೆ ಮಾಡಿಕೊಂಡು ಕೆಲವು ಕಛೇರಿಗಳಲ್ಲಿ ಕ್ರಮಬದ್ಧವಲ್ಲದ ಸ್ವತ್ತುಗಳ ನಕಲಿ ಖಾತೆಗಳನ್ನು ಸೃಜಿಸಿ ವಂಚನೆಯಿಂದ ನೋಂದಣಿ ಮಾಡಲಾಗುತ್ತಿರುವುದು ಕಂಡು ಬಂದಿರುವುದರಿಂದ ಹಾಗೂ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸ್ವತ್ತನ್ನು ಗುರುತಿಸಬಲ್ಲ ವಿವರಣೆ ಇಲ್ಲದ ಹೊರತು ನೋಂದಣಿಗೆ ಸ್ವೀಕರಿಸಬಾರದೆಂದು ನೋಂದಣಿ ಕಾಯ್ದೆ 1908ರ ಕಲಂ 21ರಲ್ಲಿ ಅವಕಾಶ ಕಲ್ಪಿಸಿರುವುದರಿಂದ, ಇ-ಖಾತೆಯಲ್ಲಿ ಸ್ವತ್ತಿನ ಪಿಐಡಿ ಸಂಖ್ಯೆ ಸಂಯೋಜನೆ ಇಂದ ಲಭ್ಯವಾಗುವುದರಿಂದ, ಹಾಗೂ ಮಾಹಿತಿ/ದಾಖಲಾತಿ/ ಅಧಿಕೃತ/ ಬಲ್ಲಮೂಲಗಳಿಂದ ಬರುವುದರಿಂದ ಕಾವೇರಿ-2.0 ತಂತ್ರಾಂಶದಲ್ಲಿ ಕೃಷಿಯೇತರ ಸ್ವತ್ತುಗಳನ್ನು ಒಳಗೊಂಡಿರುವ ದಸ್ತಾವೇಜುಗಳಿಗೆ ಕಡ್ಡಾಯವಾಗಿ ಇ-ಸ್ವತ್ತು ಅಥವಾ ಇ-ಆಸ್ತಿ ತಂತ್ರಾಂಶಗಳಿಂದ ಮಾಹಿತಿ ಪಡೆದು ನೋಂದಾಯಿಸಲು ಹಾಗೂ ಸಂಯೋಜನೆಯೇತ್ತರ ವಿಧಾನದಲ್ಲಿ ನೋಂದಣಿಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಹಾಗೂ ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಸಂಯೋಜಿಸಿ ಈಗಾಗಲೇ ಜಾರಿಯಲ್ಲಿರುವ 41 ವಾರ್ಡ್‌ಗಳೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಿಗೂ ಸಹ ದಿನಾಂಕ:30/09/2024ರಿಂದ ಹಂತ ಹಂತವಾಗಿ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ.<br><br>ಇ-ಖಾತಾ ಇದ್ದಲ್ಲಿ ಬಹುಮಹಡಿ ವಸತಿ ಸಂಕೀರ್ಣಗಳ ನೋಂದಣಿಗೆ ಯಾವುದೇ ಸಮಸ್ಯೆ ಇರುವುದಿಲ್ಲ. |

| | | |
|---|---|---|
| ಈ) | ಯಾವುದೇ ಸೂಕ್ತ ಪೂರ್ವ ತಯಾರಿ ಇಲ್ಲದೆ ಜಾರಿಗೊಳಿಸಲಾದ ಇ-ಖಾತಾ ಇಲ್ಲದೆ ನೋಂದಣಿ ಮಾಡಲಾಗುವುದಿಲ್ಲ ಎಂಬ ಕಾರಣಕ್ಕೆ ಸರಕಾರದ ಆದಾಯದಲ್ಲಿ ನಷ್ಟವಾಗಿದ್ದು, ಈ ನಷ್ಟಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಈ ಕುರಿತು ಸರ್ಕಾರದ ನಿಲುವೇನು; | 2006 ರಿಂದ ಭೂಮಿ ತಂತ್ರಾಂಶ, 2014ರಿಂದ ಇ-ಸ್ವತ್ತು ತಂತ್ರಾಂಶ ಹಾಗೂ 2020 ರಿಂದ ಇ-ಆಸ್ತಿ ತಂತ್ರಾಂಶ, ಕಾವೇರಿ-2 ತಂತ್ರಾಂಶದೊಂಗೆ ಸಂಯೋಜನೆ ಜಾರಿಯಲ್ಲಿರುವುದರಿಂದ, ಇ-ಖಾತಾ ನೀಡುವ ವ್ಯವಸ್ಥೆ ಆಗಿಂದಲೇ ಚಾಲನೆಯಲ್ಲಿರುವುದರಿಂದ ಪ್ರಸ್ತುತ ಪೂರ್ವ ತಯಾರಿಯ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಭೌತಿಕ ಖಾತೆ ಬಳಸಿ ನೋಂದಣಿ ಮಾಡುತ್ತಿದ್ದ ಸಂದರ್ಭದಲ್ಲಿ ಸುಳ್ಳು ಗುರುತಿನ ಚೀಟಿ ಸೃಷ್ಟಿಸಿಕೊಂಡು,ಸುಳ್ಳು PID ಸಂಖ್ಯೆ ಸೃಷ್ಟಿಸಿ ,ಸರ್ಕಾರಿ ಆಸ್ತಿ, ಅಮಾಯಕರ ಆಸ್ತಿಗಳನ್ನು ಬೇರೊಬ್ಬರ ಹೆಸರಿಗೆ ನೋಂದಣಿಯಾಗುತ್ತಿದ್ದ Impersonation,ವಂಚನೆ ನೊಂದಣಿಗಳ್ಳನ್ನು, ಪ್ರಕರಣಗಳನ್ನು, ,ನೊಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆಯನ್ನು ಹಾಗೂ ಕಾನೂನುಬದ್ಧವಲ್ಲದ ನೋಂದಣಿಗಳನ್ನು ತಡೆಗಟ್ಟಲಾಗಿದೆ. ಕಾನೂನು ಬದ್ಧವಾಗಿ ನೈಜವಾದ ಆಸ್ತಿ ನೋಂದಣಿಯಿಂದ ಸರ್ಕಾರಕ್ಕೆ ಯಾವುದೇ ಆದಾಯ ನಷ್ಟ ಉಂಟಾಗಿರುವುದಿಲ್ಲ.<br><br>ಇ-ಖಾತಾ ಸಂಯೋಜನೆಯ ನಂತರ ಕಾನೂನು ಬಾಹಿರ ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನೋಂದಣಿ ಮಾಡಿಸಿಕೊಳ್ಳುತ್ತಿದ್ದ ದಸ್ತಾವೇಜುಗಳ ಸಂಖ್ಯೆ ಕಡಿಮೆಯಾಗಿದಿಯೇ ಹೊರತು ನೈಜ ದಸ್ತಾವೇಜುಗಳ ನೋಂದಣಿ ಕಡಿಮೆಯಾಗಿರುವುದಿಲ್ಲ. ಆದ್ದರಿಂದ ನಿಯಮಬಾಹಿರ ನೋಂದಣಿಯಿಂದ ಬರುತ್ತಿದ್ದ ರಾಜಸ್ವ ಕಡಿಮೆಯಾಗಿದಿಯೇ ಹೊರತು ನೈಜ ನೋಂದಣಿಯಿಂದ ಬರುತ್ತಿದ್ದ ಯಾವುದೇ ರಾಜಸ್ವ ಸರ್ಕಾರಕ್ಕೆ ಕಡಿಮೆಯಾಗಿಲ್ಲ.<br><br>2023-2024ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್‌ವರೆಗೆ 12488.89 ಕೋಟಿಗಳು ರಾಜಸ್ವ ಸಂಗ್ರಹಣೆಯಾಗಿತ್ತು.<br><br>2024-2025ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್‌ವರೆಗೆ 15135.97 ಕೋಟಿಗಳು ವಸೂಲಾತಿಯಾಗಿರುತ್ತದೆ.<br><br>ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ರೂ.2647.08 ಕೋಟಿಗಳಿಂತ ಹೆಚ್ಚು ವಸೂಲಾಗಿರುವುದು ಕಂಡು ಬರುತ್ತದೆ. |

| | | |
|---|---|---|
| ಉ) | ಬಹುಮಹಡಿ ವಸತಿ ಸಂಕೀರ್ಣಗಳಲ್ಲಿ ಕೆಲವು ವಸತಿ ಗೃಹಗಳು ಇ-ಖಾತಾ ಇಲ್ಲದೆ ಮಾರಾಟ ನೋಂದಣಿಯಾಗಿದ್ದು, ಅದೇ ವಸತಿ ಸಂಕೀರ್ಣದಲ್ಲಿ ಬಾಕಿ ಉಳಿದ ಇತರ ವಸತಿ ಗೃಹಗಳು ಇ-ಖಾತಾ ಇಲ್ಲದೆ ಮಾರಾಟ ನೋಂದಣಿ ಸಾಧ್ಯವಾಗದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರಕಾರದ ನಿಲುವೇನು? | ಗಮನಕ್ಕೆ ಬಂದಿರುವುದಿಲ್ಲ.<br><br>ಇ-ಖಾತಾ ಇದ್ದಲ್ಲಿ ನೋಂದಣಿ ಮಾಡಲಾಗುವುದು. ಆದ್ದರಿಂದ, ಇ-ಖಾತಾ ಮಾಡಿಸಿಕೊಂಡಲ್ಲಿ ನೋಂದಣಿಗೆ ಯಾವುದೇ ಸಮಸ್ಯೆ ಇರುವುದಿಲ್ಲ. |

ಕಂಇ/219/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಲು ಒಟ್ಟು-43 ಉಪನೋಂದಣಿ ಕಛೇರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಉಪ ನೋಂದಣಿ ಕಛೇರಿ | ವಿಳಾಸ |
|---|---|---|
| 1 | ಗಾಂಧಿನಗರ | ಉಪನೋಂದಣಿ ಕಛೇರಿ, ಗಾಂಧಿನಗರ, 3ನೇ ಮತ್ತು 4ನೇ ಮಹಡಿ, ಅನೆಕ್ಸ್ ಕಟ್ಟಡ, ಬೆಂಗಳೂರು ನಗರ ಡಿ.ಸಿ. ಕಛೇರಿ ಕಾಂಪೌಂಡ್, ಬೆಂಗಳೂರು-560009. |
| 2 | ಮಲ್ಲೇಶ್ವರಂ | ಉಪನೋಂದಣಿ ಕಛೇರಿ, ಮಲ್ಲೇಶ್ವರಂ, ಮಲ್ಲೇಶ್ವರಂ, ನಂ 17, ಮಾರುತಿ ಪ್ಲಾಜಾ, 2 ನೇ ಮಹಡಿ, 2 ನೇ ಮುಖ್ಯ ರಸ್ತೆ, ವೈಯಾಲಿಕಾವಲ್ ವಿಸ್ತರಣೆ ಬೆಂಗಳೂರು 560003. |
| 3 | ಗಂಗಾನಗರ | ಉಪನೋಂದಣಿ ಕಛೇರಿ, ಗಂಗಾನಗರ, No: 46,1 ನೇ ಮಹಡಿ, ಎಸ್‌ಬಿಐ ಬ್ಯಾಂಕ್ ಹತ್ತಿರ, ಬಳ್ಳಾರಿ ಮುಖ್ಯ ರಸ್ತೆ ಆರ್ ಟಿ ನಗರ ಪೋಸ್ಟ್ ಗಂಗಾನಗರ ಬೆಂಗಳೂರು-560032. |
| 4 | ಹೆಬ್ಬಾಳ | ಉಪನೋಂದಣಿ ಕಛೇರಿ, ಹೆಬ್ಬಾಳ, No:7 80 feet ರಸ್ತೆ, H.M.T ಲೇಔಟ್, R T ನಗರ ಪೋಸ್ಟ್, ಬೆಂಗಳೂರು -560032. |
| 5 | ಕಾಚರಕನ ಹಳ್ಳಿ | ಉಪನೋಂದಣಿ ಕಛೇರಿ, ಕಾಚರಕನಹಳ್ಳಿ, ನಂ. 798, ರಾಮಾಂಜಿನಿ ಕಾಂಪ್ಲೆಕ್ಸ್, ಫಿಲೋಮಿನಾ ಆಸ್ಪತ್ರೆ ರಸ್ತೆ, ಪಟೇಲ್ ಮುನಿವೆಂಕಟಪ್ಪ ಲೇಔಟ್, ನಾಗವಾರ, ಬೆಂಗಳೂರು -560045. |
| 6 | ಬ್ಯಾಟರಾಯನಪುರ | ಉಪನೋಂದಣಿ ಕಛೇರಿ, ಬ್ಯಾಟರಾಯನಪುರ, 1 ನೇ ಮಹಡಿ, 3 ನೇ ಕ್ರಾಸ್, B.B.M.P ವಾರ್ಡ್ ಸಂಖ್ಯೆ 8, ಬಲಮುರಿ ಗಣಪತಿ ದೇವಸ್ಥಾನದ ಹತ್ತಿರ, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಟಾಟಾನಗರ,ಬೆಂಗಳೂರು -560092. |
| 7 | ಯಲಹಂಕ | ಉಪನೋಂದಣಿ ಕಛೇರಿ, ಯಲಹಂಕ, ಮಿನಿ ವಿಧಾನ ಸೌಧ, ಯಲಹಂಕ, ಬೆಂಗಳೂರು -560064. |
| 8 | ಜಾಲಾ | ಉಪನೋಂದಣಿ ಕಛೇರಿ, ಜಾಲಾ ರೇಷ್ಮೆ ಮತ್ತು ರೈತ ಸಹಕಾರಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಚಿಕ್ಕಜಾಲ, ನಾಡ ಕಚೇರಿ ಹತ್ತಿರ, ಚಿಕ್ಕಜಾಲ ಪೊಲೀಸ್ ಠಾಣೆ ಎದುರು. ಎನ್‌ಎಚ್ 7, ಬಳ್ಳಾರಿ ರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು -562 157 |
| 9 | ಹೆಸರಘಟ್ಟ | ಉಪನೋಂದಣಿ ಕಛೇರಿ, ಹೆಸರಘಟ್ಟ,ಎಚ್.ಸಿ.ಪುಟ್ಟಸ್ವಾಮಿ ವಿನ್ಯಾಸ, ಹೊಸ ಬಸ್ ನಿಲ್ದಾಣದ ಹತ್ತಿರ & ನಾಡ ಕಚೇರಿ ಕಚೇರಿಯ ಹತ್ತಿರ, ಕೆಇಬಿ ಕಚೇರಿಯ ಪಕ್ಕದಲ್ಲಿ, ಹೆಸರಘಟ್ಟ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು -560 088. |
| 10 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಬಿಡಿಎ ಮುಖ್ಯ ಕಛೇರಿ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560020 |
| 11 | ಜಯನಗರ | ಉಪನೋಂದಣಿ ಕಛೇರಿ, ಜಯನಗರ, 12ನೇ ಮುಖ್ಯ ರಸ್ತೆ 4ನೇ ಬ್ಲಾಕ್, ಜಯನಗರ ಕಾಂಪ್ಲೆಕ್ಸ್ ಹತ್ತಿರ, ಬೆಂಗಳೂರು -5600410 |
| 12 | ಶಾಂತಿನಗರ | ಉಪನೋಂದಣಿ ಕಛೇರಿ , ಶಾಂತಿನಗರ, 29/1, 29/2, 2ನೇ ಮಹಡಿ, 7ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು-27 |

| | | |
|---|---|---|
| 13 | BTM ಲೇಔಟ್ | ಉಪನೋಂದಣಿ ಕಛೇರಿ, ಬಿಟಿಎಂ ಲೇಔಟ್, ಸಂಖ್ಯೆ.13 & 13/2, 7ನೇ ಕ್ರಾ. , ತಾವರೆಕೆರೆ ಮುಖ್ಯ ರಸ್ತೆ , ಬಿಟಿಎಂ ಲೇಔಟ್ 1ನೇ ಹಂತ, ಬೆಂಗಳೂರು-76. |
| 14 | ಕೆಂಗೇರಿ | ಉಪನೋಂದಣಿ ಕಛೇರಿ, ಕೆಂಗೇರಿಎಸ್.ಎಲ್.ಎನ್ ಕಾಂಪ್ಲೆಕ್ಸ್, ಮೈಸೂರು ರಸ್ತೆ, ಬಿಟಿಎಸ್ ಬಸ್ ನಿಲ್ದಾಣದ ಹತ್ತಿರ, ಕೆಂಗೇರಿ, ಬೆಂಗಳೂರು -560060. |
| 15 | ರಾಜರಾಜೇಶ್ವರಿ ನಗರ | ಉಪನೋಂದಣಿ ಕಛೇರಿ, ರಾಜರಾಜೇಶ್ವರಿ ನಗರ, ಸಂಖ್ಯೆ. 25, ಡಿಎಂ ಚೇಂಬರ್ಸ್ ಜವಹಾರ್ ಲಾಲ್ ನೆಹರು ರಸ್ತೆ, ಬಿಎಂಇಎಲ್ ರಸ್ತೆ, 3ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು-560098. |
| 16 | ಜೆಪಿ ನಗರ | ಉಪನೋಂದಣಿ ಕಛೇರಿ, ಜೆ.ಪಿ.ನಗರ ಸಂಖ್ಯೆ.8, ಅಮಿತ್ ಆರ್ಕೆಡ್, ಅಮೃತ ನಗರ ಮುಖ್ಯ ರಸ್ತೆ, ಕೋಣನಕುಂಟೆ, ಬೆಂಗಳೂರು-560 062. |
| 17 | ಬೊಮ್ಮನಹಳ್ಳಿ | ಉಪನೋಂದಣಿ ಕಛೇರಿ, ಬೊಮ್ಮನಹಳ್ಳಿ, 2ನೇ ಮಹಡಿ, 7ನೇ ಕ್ರಾಸ್, 3ನೇ ಬ್ಲಾಕ್, ಕೋರಮಂಗಲ, ಬಿಡಿಎ ಕಾಂಪ್ಲೆಕ್ಸ್,ಬೆಂಗಳೂರು-560034 |
| 18 | ಬೇಗೂರು | ಉಪನೋಂದಣಿ ಕಛೇರಿ, ಬೇಗೂರು ಸಂಖ್ಯೆ. 1105/9ಸಿ, 1ನೇ ಮಹಡಿ,ಕೆನರಾ ಬ್ಯಾಂಕ್ ಮೇಲೆ, ಬಸ್ ನಿಲ್ದಾಣದ ಹತ್ತಿರ, ಬೇಗೂರು, ಬೆಂಗಳೂರು-560 016. |
| 19 | ತಾವರೆಕೆರೆ | ಉಪನೋಂದಣಿ ಕಛೇರಿ, ತಾವರೆಕೆರೆ, ಸಂಖ್ಯೆ.1943,ಅನುಗ್ರಹ, ತಾವರೆಕೆರೆ-ಕೆಂಗೇರಿ ರಸ್ತೆ, ತಾವರೆಕೆರೆ, ಬೆಂಗಳೂರು-562 130 |
| 20 | ಬಸವನಗುಡಿ | ಉಪನೋಂದಣಿ ಕಛೇರಿ, ಬಸವನಗುಡಿ , ನಂ. 183, 1 ನೇ ಮಹಡಿ, ಪೂಜ್ಯಯ್ಯ ಆರ್ಕೇಡ್, ಗಾಂಧಿಬಜಾರ್ ಮುಖ್ಯ ರಸ್ತೆ, ಬಸವಗುಡಿ, ಬೆಂಗಳೂರು 560 004 |
| 21 | ಚಾಮರಾಜಪೇಟೆ | ಉಪನೋಂದಣಿ ಕಛೇರಿ, ಚಾಮರಾಜ ಪೇಟೆ, 3 ನೇ ಮುಖ್ಯ ರಸ್ತೆ, ರಾಮೇಶ್ವರ ದೇವಸ್ಥಾನದ ಹತ್ತಿರ, ಚಾಮರಾಜಪೇಟೆ, ಬೆಂಗಳೂರು - 560 018 |
| 22 | ಬನಶಂಕರಿ | ಉಪನೋಂದಣಿ ಕಛೇರಿ, ಬನಶಂಕರಿ, ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ವ್ಯಾಪಾರ ಸಂಸ್ಥೆ ಕಟ್ಟಡ (ಎಪಿಎಂಸಿ), ಕನಕಪುರ ರಸ್ತೆ, ಬನಶಂಕರಿ, ಬೆಂಗಳೂರು560050 |
| 23 | ಆನೇಕಲ್ | ಉಪನೋಂದಣಿ ಕಛೇರಿ, ಆನೇಕಲ್,ನಂ. 172/1, 1 ನೇ ಮಹಡಿ, ಪ್ರೇರಣಾ ಕಾಂಪ್ಲೆಕ್ಸ್, ಮಿರ್ಜಾ ರಸ್ತೆ, ಆನೇಕಲ್ ಟೌನ್, ಬೆಂಗಳೂರು - 562106. |
| 24 | ಅತ್ತಿಬೆಲೆ | ಉಪನೋಂದಣಿ ಕಛೇರಿ, ಅತ್ತಿಬೆಲೆ, ಸಂಖ್ಯೆ.430, ಅಣ್ಣಾ ಬಿಲ್ಡಿಂಗ್ ಹೆನ್ನಾಗರ ಗೇಟ್, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು-560105 |
| 25 | ಸರ್ಜಾಪುರ | ಉಪನೋಂದಣಿ ಕಛೇರಿ, ಸರ್ಜಾಪುರ, RRL ಟವರ್, 2 ನೇ ಮಹಡಿ, ವಾರ್ಡ್ ನಂ. 10, ಬೆಂಗಳೂರು ಮುಖ್ಯ ರಸ್ತೆ, ಸೋಂಪುರ ಗೇಟ್, ಸರ್ಜಾಪುರ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು - 562 125 |
| 26 | ಜಿಗಣಿ | ಉಪನೋಂದಣಿ ಕಛೇರಿ, ಜಿಗಣಿ, ಮನೆ ನಂಬರ್.459/39/2, ಬನ್ನೇರುಘಟ್ಟ, ಪೊಲೀಸ್ ಠಾಣೆ ಎದುರು, ಬನ್ನೇರುಘಟ್ಟ, ಬೆಂಗಳೂರು.-560083 |
| 27 | ರಾಜಾಜಿನಗರ | ಉಪನೋಂದಣಿ ಕಛೇರಿ, ರಾಜಾಜಿನಗರ, ಸಂಖ್ಯೆ.27/ಸಿ, 3ನೇ ಮುಖ್ಯ ರಸ್ತೆ, ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು-560010 |
| 28 | ಯಶವಂತಪುರ | ಉಪನೋಂದಣಿ ಕಛೇರಿ, ಯಶವಂತಪುರ, ಸಂಖ್ಯೆ.199, 3ಬಿ ಕಾಂಪ್ಲೆಕ್ಸ್ 1ನೇ ಮಹಡಿ, 13ನೇ ಕ್ರಾಸ್, ಪಶ್ಚಿಮ ಕಾರ್ಡ್ ರಸ್ತೆಯ 2 ನೇ ಹಂತ ಬೆಂಗಳೂರು -86 |
| 29 | ಪೀಣ್ಯ | ಉಪನೋಂದಣಿ ಕಛೇರಿ, ಪೀಣ್ಯ, ಸಂಖ್ಯೆ. 488, 2ನೇ ಮಹಡಿ, ಕೆಐಎಬಿಡಿ ಕಟ್ಟಡ, 'ಪಿ' ಬ್ಲಾಕ್, ಐವಿ ಹಂತ, ಪೀಣ್ಯ II ಹಂತ, ಬೆಂಗಳೂರು -560058. |

| | | |
|---|---|---|
| 30 | ಶ್ರೀರಾಮ ಪುರ | ಉಪನೋಂದಣಿ ಕಛೇರಿ, ಶ್ರೀರಾಂಪುರ, ಸಂಖ್ಯೆ. 1250-51, ಆರ್.ಪಿ. ಕನ್ವೆನ್ಷನ್ ಹಾಲ್ ಎದುರು, ಅಗ್ರಹಾರ ದಾಸರಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು - 560 058 |
| 31 | ಲಗ್ಗೆರೆ | ಉಪನೋಂದಣಿ ಕಛೇರಿ, ಲಗ್ಗೆರೆ ಸಂಖ್ಯೆ.13, ಅಂದಾನಪ್ಪ ಕಟ್ಟಡ,ಲಗ್ಗರೆ ಮುಖ್ಯ ರಸ್ತೆ,ಪಾರ್ವತಿನಗರ ಬಸ್ ನಿಲ್ದಾಣದ ಹತ್ತಿರ,ಬೆಂಗಳೂರು -560 058 |
| 32 | ನಾಗರಬಾವಿ | ನಂ:03, ಲೀಲಾ ಆರ್ಕೇಡ್, 2ನೇ ಮಹಡಿ, ನಾಗರಭಾವಿ 2ನೇ ಹಂತ, ಬಿಡಿಎ ಕಾಂಪ್ಲೆಕ್ಸ್ ಹಿಂಭಾಗ, ಬೆಂಗಳೂರು-560072. |
| 33 | ಮಾದನಾಯಕನಹಳ್ಳಿ | ಉಪನೋಂದಣಿ ಕಛೇರಿ, ಮಾದನಾಯಕನಹಳ್ಳಿ, ನಂ.1, 1 ನೇ ಮಹಡಿ, ಲಕ್ಷ್ಮಿಪುರ ರಸ್ತೆ, ಬಿ.ಎಚ್ ರಸ್ತೆ, ಮಹಾವೀರ್ ನರ್ಸಿಂಗ್ ಹೋಮ್ ಎದುರು, ಮಾದನಾಯಕನಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು -562123 |
| 34 | ದಾಸನಾಪುರ | ಉಪನೋಂದಣಿ ಕಛೇರಿ, ದಾಸನಪುರ ಸಂಖ್ಯೆ.33/4, ಬಿ.ಹೆಚ್.ರೋಡ್, ದೇವಣ್ಣನ ಪಾಳ್ಯ, ದಾಸನಪುರ, ಬೆಂಗಳೂರು- ಉತ್ತರ ತಾಲ್ಲೂಕು, ಬೆಂಗಳೂರು-562123 |
| 35 | ವಿಜಯನಗರ | ಉಪ ನೋಂದಣಿ ಕಛೇರಿ, ವಿಜಯನಗರ, ನಂ.161/1-1, ಎಂ.ಸಿ, ಬಡಾವಣೆ, 18ನೇ ಕ್ರಾಸ್, ಸಿ.ಬಿ.ಹೆಚ್ಎಸ್, ಬಡಾವಣೆ ವಿಜಯನಗರ, ಬೆಂಗಳೂರು. |
| 36 | ಶಿವಾಜಿನಗರ | ಉಪನೋಂದಣಿ ಕಛೇರಿ, ಶಿವಾಜಿನಗರ, ನಂ. 122/2 3ನೇ ಮಹಡಿ ಮೊನಾರ್ಕ್ ಚೇಂಬರ್ಸ್ ಇನ್‌ಫೆಂಟ್ರಿ ರಸ್ತೆ ಶಿವಾಜಿನಗರ ನಗರ, ಬೆಂಗಳೂರು-560001 |
| 37 | ಕೆಆರ್ ಪುರಂ | ಹಿರಿಯ ಉಪ ನೋಂದಣಾಧಿಕಾರಿ ಕಛೇರಿ, ಕೆ.ಆರ್.ಪುರಂ, ಎಸ್.ಎಲ್.ವಿ ಸನ್ ರೈಸ್ ಅವೆನ್ಯೂ, 1ನೇ ಮಹಡಿ, ಪೋಲೀಸ್ ಕ್ವಾಟ್ರಸ್ ಎದುರು, ಕೆ.ಆರ್.ಪುರಂ ಬಡಾವಣೆ, ಬೆಂಗಳೂರು. |
| 38 | ವರ್ತೂರು | ಉಪನೋಂದಣಿ ಕಚೇರಿ, ವರ್ತೂರುಬಿ.ಎಂ ಕಾಂಪ್ಲೆಕ್ಸ್, 1 ನೇ ಮಹಡಿ, ಧರ್ಮರಾಯ ಸ್ವಾಮಿ ದೇವಸ್ಥಾನ ಎದುರು.ಮುತ್ತಸಂದ್ರ ರಸ್ತೆ, ವರ್ತೂರು,ಬೆಂಗಳೂರು -560087 |
| 39 | ಬಿದರಹಳ್ಳಿ | ನಂ.4 ಮತ್ತು 5, ತ್ರಿಭುವನ್ ಆರ್ಕೇಡ್, ಕೇಂದ್ರ ಸ್ಥಾನ: ಅವಲಹಳ್ಳೀ, ವಿರ್ಗೋನಗರ ಅಂಚೆ, ಹಳೆಯ ಮರದಾಸ್ ರಸ್ತೆ, ಎನ್ ಹೆಚ್ 4, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-560049 |
| 40 | ಬಾಣಸವಾಡಿ | ಉಪನೋಂದಣಿ ಕಛೇರಿ, ಬಾಣಸವಾಡಿ, ಸಂಖ್ಯೆ.740/1, ಬಿಬಿಎಂಪಿ ಖಾತಾ ಸಂಖ್ಯೆ-25, 1ನೇ ಮಹಡಿ, 9ನೇ ಮುಖ್ಯ ರಸ್ತೆ, ಹೆಚ್.ಆರ್.ಬಿ.ಅರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣ ನಗರ, ಬಾಣಸವಾಡಿ, ಬೆಂಗಳೂರು-560043 |
| 41 | ಮಹದೇವಪುರ | ಉಪನೋಂದಣಿ ಕಛೇರಿ, ಮಹಾದೇವಪುರ ಸಂಖ್ಯೆ-52 ಕಾಮಧೇನು ನಗರ, 1ನೇ ಹಂತ, 2ನೇ ಮುಖ್ಯ ರಸ್ತೆ, ಬಿ.ನಾರಾಯಣಪುರ, ಹೆಚ್.ಪಿ ಕಂಪನಿ ಪಕ್ಕ, ಬೆಂಗಳೂರು-560 016 |
| 42 | ಇಂದಿರಾ ನಗರ | ಉಪನೋಂದಣಿ ಕಛೇರಿ, ಇಂದಿರಾ ನಗರ, ದೊಮ್ಮಲೂರು, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560038 |
| 43 | ಹಲಸೂರು | ಉಪನೋಂದಣಿ ಕಛೇರಿ ಹಲಸೂರು, B.B.M.P ಕಟ್ಟಡ, ಟ್ಯಾಂಕ್ ಬಂಡ್ ರಸ್ತೆ, ಹಲಸೂರು ಕೆರೆ, ಹಲಸೂರು, ಬೆಂಗಳೂರು-560008. |